**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ**

**ಸ್ಪೆಷಲ್ ಕೇಸ್: 54/2019**

ಪ್ರಾಸಾ-21
ಚಾಸಾ-30

| | |
|---|---|
| ಸಾಕ್ಷಿದಾರರ ಹೆಸರು | : ಡಾಃ ಶೀಲಾ ಟಿ |
| ಗಂಡನ ಹೆಸರು | : ಹರೀಶ್ ಎಂ.ಎನ್.ಕೆ |
| ವಯಸ್ಸು | : 40 ವರ್ಷ |
| ವೃತ್ತಿ | : ಹಿರಿಯ ವೈಜ್ಞಾನಿಕಧಿಕಾರಿ, ಎಫ್.ಎಸ್.ಎಲ್., ಬೆಂಗಳೂರು. |
| ವಾಸ | : ಬೆಂಗಳೂರು. |

**ಸಾಕ್ಷಿಯನ್ನು ದಿನಾಂಕ 09-12-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ</u>: <u>(Through Video conference in Jitsi meet app).</u>**

1. ನಾನು ಮಾರ್ಚ್-2014 ರಲ್ಲಿ ಸೈಂಟಿಫಿಕ್ ಆಫೀಸರ್ ಆಗಿ ಸೇರಿದ್ದು ಮತ್ತು ಡಿಸೆಂಬರ್-2019 ರಿಂದ firearm ವಿಭಾಗದಲ್ಲಿ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಬೆಂಗಳೂರಿನ ಎಫ್.ಎಸ್.ಎಲ್. ನಲ್ಲಿ ಕರ್ತವ್ಯ ನಿರ್ವಹಿಸುತಿದ್ದು, ಪ್ರಸುತ್ತ ನಾನು ವಿಷ ವಿಜ್ಞಾನ ವಿಭಾಗದಲ್ಲಿ ಕೆಲಸ ಮಾಡುತಿದ್ದೇನೆ.

2. ನನಗೆ M.Sc., ಪಿಹೆಚ್.ಡಿ ಆಗಿದ್ದು, ನಾನು ನವದೆಹಲಿಯ ಎನ್.ಐ.ಸಿ.ಎಫ್.ಎಸ್. ನಲ್ಲಿ ನ್ಯಾಯ ವಿಜ್ಞಾನದ ಬಗ್ಗೆ ಎರಡು ತರಬೇತಿಗಳನ್ನು ಮತ್ತು ಒಂದು ತಿಂಗಳು F.S.L. ನಲ್ಲಿ House training

ಯನ್ನು ಪಡೆದಿರುತ್ತೇನೆ. ನಾನು ನ್ಯಾಯ ವಿಜ್ಞಾನ ನನ್ನ ಸೇವಾ ಅವಧಿಯಲ್ಲಿ ಸುಮಾರು 400 ಪ್ರಕರಣಗಳ ವಿಶ್ಲೇಷಣೆ ಮಾಡಿ, ವರದಿಯನ್ನು ನೀಡಿದ ಸುಮಾರು 25 ನ್ಯಾಯಾಲಯಗಳ ಪ್ರಕರಣಗಳಲ್ಲಿ ಸಾಕ್ಷಿದಾರರಾಗಿ ಸಾಕ್ಷಿಗಳನ್ನು ನುಡಿದಿರುತ್ತೇನೆ. ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತೇನೆ.

3. ದಿನಾಂಕಃ 05-11-2019 ರಂದು ನಮ್ಮ ಕಛೇರಿಯ ಸ್ವಾಗತ ವಿಭಾಗದವರು ಮೊಕದಮ್ಮೆ ಸಂಖ್ಯೆಃ 152/2019 ಗೆ ಸಂಬಂಧಿಸಿದ 7 ಸೀಲಾದ ವಸ್ತುಗಳನ್ನು ಸೋಮವಾರಪೇಟೆ ಪೊಲೀಸ್ ಠಾಣೆಯ, ಜಗದೀಶ್ ಕೆ.ಆರ್., ಪೊಲೀಸ್ ಪೇದೆ-186 ರವರಿಂದ ಸ್ವೀಕರಿಸಲಾಗಿದ್ದು, ಸದರಿ ವಸ್ತುಗಳನ್ನು ಸ್ವೀಕರಿಸಿ, ನೋಂದಾಣಿ ಮಾಡಿ ಅವುಗಳನ್ನು ನಮ್ಮ ವಿಭಾಗಕ್ಕೆ ಪರೀಕ್ಷೆಗಾಗಿ ಕಳುಹಿಸಿದ್ದರು. ಸದರಿ ವಸ್ತುಗಳ ಮೇಲೆ ಇದ್ದ ಸೀಲುಗಳು ಮಾದರಿ ಸೀಲಿನೊಂದಿಗೆ ಹೋಲಿಕೆ ಆಗುತ್ತಿದ್ದವು ಮತ್ತು ಸೀಲುಗಳು ಸುಸ್ಥಿತಿಯಲ್ಲಿ ಇದ್ದವು.

ಸದರಿ 7 ವಸ್ತುಗಳನ್ನು ಪರೀಕ್ಷಿಸಿದ್ದು, ಅವುಗಳ ವಿವರ ಈ ಕೆಳಗಿನಂತೆ ಇರುತ್ತದೆ. Article No. 1- One brown color Jacket Article No. 2- One white color T shirt, Article No. 3- One blue jeans Pant, Article No. 4- Six lead pellets, Article No. 5-One 12 bore DBBL Gun of BUDHOO & SONS bearing Sl.No.17151, Article No. 6-One 12 bore cartridge case, Article No. 7-Five lead pellets ಗಳು ಇದ್ದು, ಸದರಿ ಮೇಲೆ ಹೇಳಿದ ವಸ್ತಗಳನ್ನು ದಿನಾಂಕ 14-

02-2020 ರಿಂದ 20-02-2020 ರವರೆಗೆ ಪರೀಕ್ಷಿಸಿರುತ್ತೇನೆ.

4. ಸದರಿ ವಸ್ತುಗಳನ್ನು ಪರೀಕ್ಷೆ ಮಾಡಿ ಈ ಕೆಳಗಿನಂತೆ ನನ್ನ ಅಭಿಪ್ರಾಯ ವರದಿಯನ್ನು ನೀಡಿರುತ್ತೇನೆ.

1. The gunshot holes marked as H-1 and H-2 on the Jacket in Article No.1 have been caused due to the impact and passage of lead projectiles, which could have been fired through the DBBL Gun in Article No.5.

2. The gunshot hole on the T-shirt in Article No.2 has been caused due to the impact and passage of lead projectiles, which could have been fired through the DBBL Gun in Article No.5.

3. No typical gunshot holes present on the pant in Article No.3.

4. The lead pellets present in Article No.4 and 7 are the integrated part of a 12

bore cartridge, which could have been fired through the DBBL gun in Article No.5.

5. The DBBL gun in Article No.5 is a company made firearm.

6. The DBBL gun in Article No.5 bears signs of discharge but no opinion is possible regarding the actual date and time of firing.

7. The DBBL gun in Article No.5 was in working condition.

8. The 12 bores cartridge case in Article No.6 has been fired through the left side barrel of the DBBL gun in Article No.5.

5. ಈಗ ನಾನು ನೋಡುತ್ತಿರುವ ಅಭಿಪ್ರಾಯ ವರದಿ ನಾನು ನೀಡಿದ ಅಭಿಪ್ರಾಯ ವರದಿ ಆಗಿದ್ದು, ಅದನ್ನು ನಿಪಿ-27 ಎಂದು, ಸಾಕ್ಷಿ ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯಿತು. ನನ್ನ ವರದಿಯೊಂದಿಗೆ method of examination ಮತ್ತು reasons ಗಳನ್ನು ಸಹ ಕಳುಹಿಸಿದ್ದೇನೆ.

6. ಪರೀಕ್ಷೆ ಆದ ಬಳಿಕ ಸದರಿ ವಸ್ತುಗಳನ್ನು ಮರು ಪ್ಯಾಕ್ ಮಾಡಿ, ಸೀಲು ಮಾಡಿ ನಮ್ಮ ಕಛೇರಿಯ ಮಾದರಿ ಸೀಲಿನೊಂದಿಗೆ ಪುನಃ ಕಳುಹಿಸಿರುತ್ತೇನೆ. ಈಗ ನಾನು ನೋಡುತ್ತಿರುವ ಮಾದರಿ ಸೀಲು ನಾನು ಕಳುಹಿಸಿಕೊಟ್ಟ ಮಾದರಿ ಸೀಲಾಗಿದ್ದು, ಅದನ್ನು ನಿಪಿ-28 ಎಂದು, ಅದರಲ್ಲಿ ಇದ್ದ ಸಾಕ್ಷಿ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು. ನಾನು ಪರೀಕ್ಷೆ ಮಾಡಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

7. ಅವುಗಳನ್ನು ಈಗಾಗಲೇ ಮು.ಮಾ-1 ರಿಂದ ಮು.ಮಾ-7, ಎಂದು ಗುರುತಿಸಲಾಗಿದೆ. ನಾನು ಟೆಸ್ಟ್ ಫೈ ರ್ ಮಾಡಿದ ವಸ್ತುವನ್ನು ಕಳುಹಿಸಿದ್ದು , ಅದನ್ನು ಸಹ ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸೀಲಾದ ವಸ್ತುಗಳನ್ನು ತೆರೆಯಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು. ಈಗ ನಾನು ನೋಡುತ್ತಿರುವ 6 ಕಾಲಿ ತೋಟೆಗಳು ನಾನು ಟೆಸ್ಟ್ fire ಮಾಡಿದ ವಸ್ತುಗಳಾಗಿದ್ದು ಅವುಗಳನ್ನು , ಅದನ್ನು ಮು.ಮಾ-8 ಎಂದು, ಗುರುತಿಸಲಾಯಿತು.

**ಪಾಟೀಸವಾಲು- ಆರೋಪಿಯ ಪರವಾಗಿ ಶ್ರೀ. ಎ.ಜಿ.ಜಿ. ವಕೀಲರಿಂದ:**

8. ಒಬ್ಬ ವ್ಯಕ್ತಿ ನೆರವಾಗಿ 10 ಅಡಿಗಳ ಅಂತರದಿಂದ ಎದೆಗೆ ಗುರಿ ಮಾಡಿ fire ಮಾಡಿದರೆ exit wound ಕಾಣುವ ಸಾಧ್ಯತೆ ಇದೆ ಎಂದರೆ ಸಾಕ್ಷಿ ಅದು angle of target ಅವಲಂಬಿಸಿದೆ ಎಂದು ನುಡಿಯುತ್ತಾರೆ. Caliber of the gun, velocity of projectile ಅನ್ನು ಅವಲಂಬಿಸಿ ಒಬ್ಬ ವ್ಯಕ್ತಿ ನೇರವಾಗಿ ನಿಂತುಕೊಂಡು 10 ಅಡಿಗಳ ಅಂತರದಿಂದ ಎದೆಗೆ ಗುರಿಮಾಡಿ fire ಮಾಡಿದರೆ exit wound ಕಾಣುವ ಸಾಧ್ಯತೆ ಇದೆ. ಒಬ್ಬ ವ್ಯಕ್ತಿ ನೇರವಾಗಿ 10 ಅಡಿಗಳ ಅಂತರದಿಂದ ಎದೆಗೆ ಗುರಿ ಮಾಡಿ fire ಮಾಡಿದರೆ ಎದೆಯ ಭಾಗದಲ್ಲಿ ಕಪ್ಪು ಕಲೆ ಕಾಣಿಸುವ ಸಾಧ್ಯತೆ ಇಲ್ಲ. 12 bore ನ ಗನ್ನಿನಿಂದ fire ಮಾಡಿದರೆ ಆ ರೀತಿ ಆಗುವ ಸಾಧ್ಯತೆ ಇದೆ ಎಂದರೆ ಸಾಕ್ಷಿ ಅದು ಎಷ್ಟು ದೂರದಿಂದ fire ಮಾಡಿದ್ದಾರೆ ಎಂಬುದು ಅವಲಂಬಿಸುತ್ತದೆ. Projectile ಅನ್ನು ಅವಲಂಬಿಸಿ 10 ಅಡಿಗಳ ಅಂತರದಿಂದ ಒಬ್ಬ ವ್ಯಕ್ತಿ ಗನ್ನಿನಿಂದ ಎದೆಗೆ ನೇರವಾಗಿ fire ಮಾಡಿದರೆ exit wound ಕಾಣುವ ಸಾಧ್ಯತೆ ಇದೆ ಎಂದು ಹೇಳಬಹುದು. 6 ಫೀಟ್ ಗಳ ಅಂತರದ ಒಳಗೆ 12 ಬೋರಿನ ಶಾರ್ಟ್ ಗನ್ನಿನಿಂದ fire ಮಾಡಿದರೆ ಕಪ್ಪು ಕಲೆಗಳು ಕಾಣುವ ಸಾಧ್ಯತೆ ಇದೆ. 10 ಅಡಿಗಳ ಅಂತರದಿಂದ ನೇರವಾಗಿ 12 ಬೋರ್ ಗನ್ನಿನಿಂದ fire ಮಾಡಿದರೆ ಪೆಲೆಟ್ಸ್ ಗಳು ಚದುರುವ ಸಾಧ್ಯತೆ ಇಲ್ಲ. Tangential shot ಗೆ ಆ ಬಗ್ಗೆ ಪ್ರಯೇಗ ಮಾಡಿದ ಕಾರಣ ಪೆಲೆಟ್ಸ್ ಗಳ ಚದುರಿವಿಕೆಯ ಬಗ್ಗೆ ಹೇಳಲು ಸಾಧ್ಯವಿಲ್ಲ.

9. ನಾನು ಜಾಕೇಟನ್ನು ಪರಿಶೀಲಿಸಿದಾಗ ಅದರ ಯಾವ ಭಾಗದಲ್ಲಿ ಎಷ್ಟು ತೂತುಗಳು ಇದ್ದವು ಎಂದರೆ ಸಾಕ್ಷಿ ಜರ್ಕಿನಿನ ಎಡ ಭಾಗದ ಪಾಕೇಟ್ಟಿನ ಮೇಲ್ಭಾಗದಲ್ಲಿ ಒಂದು ತೂತು ಇತ್ತು ಎಂದು ನುಡಿಯುತ್ತಾರೆ. ಅದೇ ರೀತಿ ಜರ್ಕೀನಿನ ಬಲ ಭಾಗದಲ್ಲಿ ಸಹ 1.8 x 1.3 ಗಾತ್ರದ ಇನ್ನೊಂದು ತೂತು ಇತ್ತು. Tangential shot ಎಂದರೆ ಪೆಲೆಟ್ ಗಳು ಸವರಿಕೊಂಡು ಹೋಗುವುದು. ಆ ರೀತಿಯ ಶಾಟ್ ಗಳು cross ಆಗಿ ಹೋದರೆ ಮಾತ್ರ ಆಗುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ಈ ರೀತಿಯ ಶಾಟ್ ಗಳು ಗನ್ನನ್ನು ಒಬ್ಬ ವ್ಯಕ್ತಿ ಎಳೆದ ಸಂದರ್ಭದಲ್ಲಿ miss fire ಆಗಿ ಆಗುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ಗನ್ನನ್ನು ಎಳೆದಾಡಿ ನಾನು ಪ್ರಯೋಗ ಮಾಡಿ ನೋಡದ ಕಾರಣ ಆ ಸಂದರ್ಭದಲ್ಲಿ ಯಾವ ರೀತಿಯಾಗಿ fire ಮಾಡಿದರೆ ಯಾವ ದಿಕ್ಕಿನಲ್ಲಿ ಪೆಲೆಟ್ಸ್ ಗಳು ಚದುರುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಇದೇ ಗನ್ನಿನಿಂದ ಪೆಲೆಟ್ಸ್ fire ಆಗಿದೆ ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ನಾನು ಪರೀಕ್ಷೆ ಮಾಡಿದ ಪೆಲೆಟ್ಸ್ ಗಳು ಸ್ವಲ್ಪ deform ಆಗಿತ್ತು. ಅದನ್ನು ನಾನು ನನ್ನ ವರದಿಯಲ್ಲಿ ತಿಳಿಸಿದ್ದೇನೆ. ಎಡಭಾಗದ ಬ್ಯಾರೆಲ್ ನಲ್ಲಿ ಯಾವ ದಿನಂಕದಂದು ಯಾವ ಸಮಯಕ್ಕೆ fire ಆಗಿದೆ ಎಂಬ ಬಗ್ಗೆ ಅಧ್ಯಯನಗಳು ಇಲ್ಲ. ಒಂದು ತೋಟೆಯಿಂದ ಪೆಲೆಟ್ಸ್ ಗಳು ಬ್ಯಾರೆಲ್ ನ ಒಳಗೆ ಪಾಸ್ ಆದ ಬಗ್ಗೆ ಜಿಎಸ್ಆರ್ ಇರುತ್ತದೆ ಎಂದರೆ ಸರಿ. ಹೊಸದಾಗಿ fire ಆಗಿದ್ದರೆ fresh ಮಾರ್ಕುಗಳು ಅದೇ ರೀತಿ ಹಲವಾರು ತಿಂಗಳುಗಳು ಕಳೆದಿದ್ದರೆ ಹಳೆ ಮಾರ್ಕುಗಳು ಇರುತ್ತದೆ ಎಂದರೆ ಅದನ್ನು

ನಮಗೆ ವ್ಯತ್ಯಾಸ ಮಾಡಲು ಸಾಧ್ಯ ಇರುತ್ತದೆ ಎಂದರೆ ಸರಿಯಲ್ಲ. ನನಗೆ ಸದರಿ ವ್ಯತ್ಯಾಸವನ್ನು ಹೇಳಲು ಸಾಧ್ಯವಿದೆ ಆ ಕಾರಣದಿಂದ ನನ್ನ ವರದಿಯಲ್ಲಿ ಸೂಚಿಸಿಲ್ಲ ಎಂದರೆ ಸರಿಯಲ್ಲ. ಒಬ್ಬ ವ್ಯಕ್ತಿ ನೇರವಾಗಿ 10 ಅಡಿಗಳ ಅಂತರದಿಂದ fire ಮಾಡಿದರೆ exit wound ಬರುತ್ತದೆ ಎಂದರೆ ಸರಿಯಲ್ಲ. ಒಬ್ಬ ವ್ಯಕ್ತಿ 12 ಬೋರಿನ ಗನ್ನಿಂದ ನೇರವಾಗಿ ಎದೆಗೆ ಗುರಿ ಹಿಡಿದು 10 ಅಡಿಗಳ ಅಂತರದಲ್ಲಿ fire ಮಾಡಿದರೆ exit wound ಬರುತ್ತದೆ ಎಂದರೆ ಸಾಕ್ಷಿ ಅದು projectile ಅನ್ನು ಅವಲಂಬಿಸುತ್ತದೆ ಎಂದು ನುಡಿಯುತ್ತಾರೆ. 12 ಬೋರಿನ ಗನ್ನುಗಳಿಂದ ಪೆಲೆಟ್ಸ್ ಗಳು 800 feet per second ನಲ್ಲಿ pass ಆಗುತ್ತವೆ. 12 ಬೋರಿನ ಗನ್ನಿನಿಂದ ನೇರವಾಗಿ ಎದೆಗೆ ಗುರಿ ಹಿಡಿದು 10 ಅಡಿಗಳ ಅಂತರದಲ್ಲಿ ಮೇಲೆ ಹೇಳಿದ ರೀತಿ ಪೆಲೆಟ್ಸ್ ಗಳು ಪಾಸ್ ಆದರೆ ಹೆಚ್ಚಿನ ಡ್ಯಾಮೇಜ್ ಆಗಬಹುದು. ಆತರದ ಪೆಲೆಟ್್ಸ ಗಳು ಮಾನವನ ದೇಹ ತಾಗಿದಾಗ exit wound ಬರುತ್ತದೆ ಎಂದರೆ ಸರಿಯಲ್ಲ. ಆ ರೀತಿಯಾಗಿ 10 ಅಡಿಗಳ ಅಂತರದಿಂದ ನೇರವಾಗಿ ಎದೆಗೆ ಗುರಿ ಹಿಡಿದು fire ಮಾಡಿದರೆ exit wound ಬರುತ್ತದೆ ಎಂದು ಗೊತ್ತಿದ್ದರು ಸಹ exit wound ಬರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ಜರ್ಕಿನ್ ನಲ್ಲಿ ಇದ್ದ ತೂತುಗಳ ಗಾತ್ರ ಮತ್ತು ಬಿಳಿ ಬಣ್ಣದ ಟಿ ಶರ್ಟಿನಲ್ಲಿ ಇದ್ದ ತೂತಿನ ಗಾತ್ರ ಸಾಮಾನ್ಯವಾಗಿ ಒಂದೇ ಸಮನಾಗಿದೆ. ಎಷ್ಟು ಪೆಲೆಟ್ಸ್ ಗಳು ಜರ್ಕಿನ್ ಹಾಗೂ ಟಿ ಶರ್ಟನ್ನು ಸವರಿಕೊಂಡು ಹೋಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ಜರ್ಕಿನ್ ಹಾಗೂ ಟಿ

ಶರ್ಟನ್ನು 2 ಪೆಲೆಟ್ಸ್ ಗಳು ಸವರಿಕೊಂಡು ಹೋಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ನನ್ನ ಪ್ರಕಾರ ಜರ್ಕಿನ್ ನಲ್ಲಿ 2 ತೂತು ಹಾಗೂ ಟಿ ಶರ್ಟಿನಲ್ಲಿ 1 ತೂತು ಇದೆ. ಪೆಲೆಟ್ಸ್ ಗಳು ದೇಹವನ್ನು ಸವರಿಕೊಂಡು ಹೋಗಿದ್ದಕ್ಕೆ ಅಲ್ಲಿ ರಕ್ತದ ಕಲೆಗಳು ಇದ್ದವು , ಆದರೆ ನಾನು ಅದರ ಬಗ್ಗೆ ಅಭಿಪ್ರಾಯ ನೀಡಲು ಸಾಧ್ಯವಿಲ್ಲ. ಪೆಲೆಟ್ಸ್ ಗಳು ಇದ್ದ ರಕ್ತದ ಕಲೆಗಳನ್ನು ತನಿಖಾಧಿಕಾರಿಗಳು ಸಂಗ್ರಹಿಸಿಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ